I. ಸೆಕೆಂಡರಿ ವಿದ್ಯಾಭ್ಯಾಸಕ್ಕೋಸ್ಕರ ಈಗ ಕೊಡುತ್ತಾ ಇರುವ ಗ್ರಾಂಟುಗಳನ್ನು ಮ್ಯುನಿಸಿಪಾಲಿಟಿಯಿಂದ ಬಿಡುಗಡೆ ಮಾಡತಕ್ಕ ವಿಷಯದಲ್ಲಿ ಗವರ್ನ್‌ಮೆಂಟಿಗೆ ಖರಿನತಕ್ಕ ವಿಚಾರ.

ಸೆಕೆಂಡರಿ ವಿದ್ಯಾಭ್ಯಾಸಕ್ಕೋಸ್ಕರ ಮ್ಯುನಿಸಿಪಾಲಿಟಿಯಿಂದ ಈಗ ಕೊಡುತ್ತಿರುವ ಖರ್ಚನ್ನು ವಜಾಮಾಡಿ ವಿದ್ಯಾಭ್ಯಾಸಕ್ಕೋಸ್ಕರ ಖಜ್ಜಟ್ಟನಲ್ಲಿರುವ ಎಲ್ಲಾ ಮೊಬಲಗನ್ನು ಪ್ರೈಮರಿ ವಿದ್ಯಾಭ್ಯಾಸಕ್ಕೆ ಉಪಯೋಗಿಸಲು ಅಪ್ಪಣೆ ಬೇಡಿ ಗವರ್ನ್‌ಮೆಂಟಿಗೆ ಖರಿಯಬೇಕೆಂದು ತೀರ್ಮಾನಿಸಿದೆ.

II. ಬೆಂಗಳೂರು ಮುನಿಸಿಪಲ್ ಇಂಜನಿಯರ ಕೆಲಸಕ್ಕೆ ಕೊಟ್ಟಿರುವ ತಮ್ಮ ಅಪ್ಲಿಕೇಷನ್ನು ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿ ಮ್ಯುನಿಸಿಪಲ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ॥ ಎಚ್. ಆರ್. ವೆಂಕಟಸುಬ್ಬರಾಯರವರು ಬರೆದುಕ್ಕೊಂಡಿರುವ ಲೆಟರ್.

ಮ್ಯುನಿಸಿಪಲ್ ಇಂಜನಿಯರವರ ಅಪ್ಲಿಕೇಷನ್ನನ್ನು ಸುಮುಖಾವಲೋಚನೆ ಬಗ್ಯೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಪ್ರಕಟನೆ.

ಸನ್ 1909ನೆ ಜನವರಿ 7ರಲ್ಲು.

ಮಂಡ್ಯದ ತಾಲ್ಲೂಕು ಮಂಡ್ಯದ ಗ್ರಾಮವನ್ನು ಅದರ ಆಸ್ಥಾನ ಇರುವ ಕಲ್ಲಹಳ್ಳಿ, ಚಿಂದಿಗಿರಿದೊಡ್ಡಿ, ಚಿಕ್ಕಮಂಡ್ಯ, ವೊಟ್ಟಲಿಂಗನದೊಡ್ಡಿ, ದ್ಯಾವೆಗೌಡನದೊಡ್ಡಿ, ಹೊಸಹಳ್ಳಿ ಎಂಬ ಈ ಆರು ಗ್ರಾಮಗಳನ್ನು ಸೇರಿಸಿ 1906ನೆ ಇಸವಿ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನನುಸರಿಸಿ ಒಂದು ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿರುತ್ತೆ. ಈ ವಿಷಯಾಡಿಗೆ ಆಕ್ಷೇಪಿಸುವವರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಮೊದಲಾವರ್ತಿ ಪ್ರಾಯಿಷಾದ 2 ತಿಂಗಳ ಒಳಗಾಗಿ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹ ಮೂಲಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ಮೇಲ್ಕಂಡ ಆರು ಉಪ ಗ್ರಾಮಗಳನ್ನು ಸೇರಿದ ಮಂಡ್ಯ ಪಟ್ಟಣದ ಚತುರ್ಗಡಿಗಳು ಈ ಕೆಳಗೆ ತೋರಿಸಲ್ಪಟ್ಟಿವೆ.

ಮಂಡ್ಯ ಮ್ಯುನಿಸಿಪಾಲಿಟಿಯ ಸರಹದ್ದು ಬನ್ನೂರು ರಸ್ತೆಯ ಹತ್ತರ ಇರುವ ಮಂಡ್ಯ ಗ್ರಾಮದ ಸರ್ವೆ 120ನೆ ನಂಬರಿನ ನೈರುತ್ಯ ಮೂಲೆಯ ಹತ್ತರ ಪ್ರಾರಂಭವಾಗಿ ಸರ್ವೆ 120—121 ಮತ್ತು 122ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ವಾಯವ್ಯಾಭಿಮುಖವಾಗಿ ಹೊರಟು ಸರ್ವೆ 124—125—126 ಮತ್ತು 127ನೆ ನಂಬರುಗಳ ದಕ್ಷಿಣ ಸರಹದ್ದನ್ನು ಸರ್ವೆ 128ನೆ ನಂಬರಿನ ನೈರುತ್ಯಮೂಲೆಯನ್ನು ಸೇರುವ ವರಿವಿಗೂ ಹೋಗುತ್ತದೆ. ಇಲ್ಲಿಂದ ಮುಂದಕ್ಕೆ ಸರ್ವೆ 215ನೆ ನಂಬರಿನ ವಾಯವ್ಯ ಮೂಲೆಯ ವರಿವಿಗೂ ಉತ್ತರಾಭಿಮುಖವಾಗಿ ಹೋಗಿ ಅಲ್ಲಿಂದ ವಾಯವ್ಯಾಭಿಮುಖವಾಗಿ ಸರ್ವೆ 216—223 ಮತ್ತು 224ನೆ ನಂಬರುಗಳ ದಕ್ಷಿಣ ಸರಹದ್ದನ್ನು ಅನುಸರಿಸಿ ಮೈಸೂರು ರಸ್ತೆಯನ್ನು ದಾಟಿಕ್ಕೊಂಡು ಸರ್ವೆ 226ನೆ ನಂಬರಿನ ನೈರುತ್ಯ ಮೂಲೆಯ ವರಿವಿಗೂ ಹೋಗುತ್ತದೆ. ಅಲ್ಲಿಂದ ಮುಂದಕ್ಕೆ ಈಶಾನ್ಯಮುಖವಾಗಿ ಸರ್ವೆ 390ನೆ ನಂಬರಿನ ಆಗ್ನೇಯ ಸರಹದ್ದಿನ ಮೂಲೆಯ ವರಿವಿಗೂ ಕಲ್ಲಹಳ್ಳಿಯ ಕೆರೆಯ ಥಡವನ್ನು ವಳಗೊಂಡು ವಾಯವ್ಯಕ್ಕೆ ತಿರಿಗಿ ಕಲ್ಲಹಳ್ಳಿ ಕೆರೆಯ ಏರಿಯನ್ನು ಅನುಸರಿಸುತ್ತದೆ. ತರುವಾಯ ಸರ್ವೆ 327ನೆ ನಂಬರಿನ ಖಳಿಯಲ್ಲಿ ಕಲ್ಲಹಳ್ಳಿ ಕೆರೆಯ ಎಡಭಾಗದ ಕೋಡಿಯನ್ನು ದಾಟಿ ಸರ್ವೆ 330—333—335ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಪಣಕನಹಳ್ಳಿ ಗ್ರಾಮದ ಎಲ್ಲೆಯನ್ನು ಸರ್ವೆ 336ನೆ ನಂಬರಿನ ಮಧ್ಯಭಾಗದಲ್ಲಿ ಪಣಕನಹಳ್ಳಿಗೆ ಹೋಗತಕ್ಕ ಭಂಡೀದಾರಿಯ ಬಳಿ ಸೇರುತ್ತದೆ. ನಂತರ ಸರ್ವೆ 336ನೆ ನಂಬರಿನ ಈಶಾನ್ಯ ಎಲ್ಲೆಯನ್ನು ಅನುಸರಿಸಿ ಸರ್ವೆ 455ನೆ ನಂಬರಿನ ವಾಯವ್ಯ ಮೂಲೆಯ ವರಿವಿಗೂ ಹೋಗಿ ಶಿವಹಳ್ಳಿ ರಸ್ತೆಯ ವರಿವಿಗೂ ನೆಟ್ಟಗೆ ಹೋಗಿ ಸದರಿ ರಸ್ತೆಯನ್ನು ದಾಟಿ ಸರ್ವೆ 456ನೆ ನಂಬರಿನ ಉತ್ತರ ಎಲ್ಲೆಯನ್ನು ಅನುಸರಿಸಿ ಸದರೀ ನಂಬರಿನ ಆಗ್ನೇಯ ಮೂಲೆಯ ವರಿವಿಗೂ ಹೋಗುತ್ತದೆ. ತರುವಾಯ ಉತ್ತರಕ್ಕೆ ಹೊರಟು ಸರ್ವೆ 877—458—471—475—875—476—481ನೆ ನಂಬರುಗಳ ಪಶ್ಚಿಮ ಎಲ್ಲೆಯಾಗಿ ಸರ್ವೆ 482ನೆ ನಂಬರಿನ ವಾಯವ್ಯ ಮೂಲೆಯ ವರಿವಿಗೂ ಹೋಗಿ ಪೂರ್ವ ಪಶ್ಚಿಮಕ್ಕೆ ತಿರಿಗಿ ಸರ್ವೆ 484 ಮತ್ತು 872ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ನಂತರ ಉತ್ತರಾಭಿಮುಖವಾಗಿ ಹೊರಟು ಸರ್ವೆ 525ನೆ ನಂಬರಿನ ಉತ್ತರ ಮೂಲೆಯ ವರಿವಿಗೂ ಸರ್ವೆ 486—495—520—523—524 ಮತ್ತು 525ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಅಲ್ಲಿ ಬಸರಾಳು ರಸ್ತೆಯನ್ನು ದಾಟಿಕ್ಕೊಂಡು ಪೂರ್ವಾಭಿಮುಖವಾಗಿಯೇ ಸರ್ವೆ 528, 529, 530, 531, 532, 533, 534, 537, 538, 546 ಮತ್ತು 548ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ತರುವಾಯ ದಕ್ಷಿಣಕ್ಕೆ ತಿರಿಗಿ ಸರ್ವೆ 561ನೆ ನಂಬರಿನ ಉತ್ತರ ಮತ್ತು ಪೂರ್ವದ ಸರಹದ್ದನ್ನು ಅನುಸರಿಸಿ ಪೂರ್ವಕ್ಕೆ ತಿರಿಗಿಕ್ಕೊಂಡು ಸರ್ವೆ 563 ಮತ್ತು 573ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ಅಲ್ಲಿಂದ ಮಂಡ್ಯ ಮತ್ತು ಗೋಪಾಲಪುರದ ಕೆರೆಗಳ ಕೋಡಿ ಹಳ್ಳಗಳ ಥಡಗಳನ್ನು ಅನುಸರಿಸಿ ಸರ್ವೆ 598ನೆ ನಂಬರಿನ ಈಶಾನ್ಯ ಮೂಲೆಯ ವರಿವಿಗೂ ಹೋಗುತ್ತದೆ. ಇಲ್ಲಿ ದಕ್ಷಿಣಾಭಿಮುಖವಾಗಿ ಸರ್ವೆ 56ನೆ ನಂಬರಿನಲ್ಲಿ ಗುತ್ತ ಲಗ್ಗಾವುದ ಎಲ್ಲೆ ಬಳಿ ಆಗ್ನೇಯ ಮೂಲೆಯ ವರಿವಿಗೂ ಮಂಡ್ಯದ ಗ್ರಾವುದ ಸರಹದ್ದನ್ನು ಅನುಸರಿಸಿ ಪಶ್ಚಿಮಕ್ಕೆ ತಿರುಗಿ ಸರ್ವೆ 56, 57, 58, 59, 60, 118 ಮತ್ತು 119ನೆ ನಂಬರುಗಳ ದಕ್ಷಿಣ ಸರಹದ್ದಿನ ಎಲ್ಲೆಯನ್ನನುಸರಿಸಿ ಬನ್ನೂರು ರಸ್ತೆಯನ್ನು ದಾಟಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

ಜೆ. ಬಿ. ಹೆಬ್ಬಿಕ್ಕರ್,
ಫಾರ್ ಡೆಪ್ಯುಟಿ ಕಮಿಷನರ್.